ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ.,
ನ್ಯಾಯಾಲಯ, ಚಿಕ್ಕಮಗಳೂರು.
ಸಿ.ಸಿ.493/2024

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಮೇನಕಾ ವಿ. | ಪಿ.ಡಬ್ಲ್ಯೂ.1 |
| ಗಂಡನ ಹೆಸರು | : | ವೆಂಕಟೇಶ್ ಚೌಹಾಣ್ | ಸಿ.ಡಬ್ಲ್ಯೂ.1 |
| ವಯಸ್ಸು | : | 45 ವರ್ಷ | |
| ವೃತ್ತಿ | : | ಕೃಷಿ ಅಧಿಕಾರಿ, | |
| ವಾಸ | : | ಚಿಕ್ಕಮಗಳೂರು | |

ದಿನಾಂಕಃ 17.02.2025 ರಂದು ಪ್ರಮಾಣ ವಚನ ಭೋದಿಸಲಾಯಿತು.

ಮಾನ್ಯ ಸರ್ಕಾರಿ ಅಭಿಯೋಜಕರು ಗೈರು ಹಾಜರಿರುತ್ತಾರೆ-

ಮುಖ್ಯ ವಿಚಾರಣೆಃ ಸಾಕ್ಷಿ ಸ್ವತಃ-

ನಾನು 2008 ರಿಂದ ಕೃಷಿ ಇಲಾಖೆಯಲ್ಲಿ ಕೃಷಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಮಾನ್ಯ ಚಿಕ್ಕಮಗಳೂರಿನ ಜಿಲ್ಲಾಧಿಕಾರಿಗಳು ದಿಃ13.03.2024 ರಂದು ಉಡುಪಿ ಮತ್ತು ಚಿಕ್ಕಮಗಳೂರು ಲೋಕಸಭಾ ಚುನಾವಣೆ ನಿಮಿತ್ತ ನನ್ನನ್ನ ಪೈಯಿಂಗ್ ಸ್ವಾಡ್ ಆಗಿ ನೇಮಕ ಮಾಡಿದ್ದರು. ಆದ್ದರಿಂದ ನಾನು 2024 ರ ಉಡುಪಿ ಮತ್ತು ಚಿಕ್ಕಮಗಳೂರು ಲೋಕಸಭಾ ಚುನಾವಣಾ ಅವಧಿಯಲ್ಲಿ ಪೈಯಿಂಗ್ ಸ್ವಾಡ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಪೈಯಿಂಗ್ ಸ್ಕ್ವಾಡ್ ಕರ್ತವ್ಯ ನಿರ್ವಹಣೆಗೆ ನನಗೆ ಇಬ್ಬರು ಪೊಲೀಸ್ ಸಿಬ್ಬಂದಿ ನವೀನ್ ಕೆ.ಜಿ ಮತ್ತು ನಗರಸಭೆ ಸಿಬ್ಬಂದಿ ಮಹಾದೇವ್ ಹಾಗೂ ವೀಡಿಯೋಗ್ರಾಫರ್ ಪ್ರಶಾಂತ್

This is a True Copy of the Court Records Online. Authenticated @ districts.ecourtsindia.com/cnr/KACM020012082024/truecopy/order-1.pdf

ಇವರನ್ನ ಕೊಡಲಾಗಿತ್ತು ಮತ್ತು ಚುನಾವಣಾ ಅಧಿಕಾರಿಗಳು ಜೀಪ್ ಅನ್ನ ಹಾಗೂ ಒಬ್ಬರು ಚಾಲಕನನ್ನ ಕೊಡಮಾಡಿದ್ದರು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ24.04.2024 ರಂದು ಮಧ್ಯಾಹ್ನಃ12.15 ಗಂಟೆ ಸಮಯದಲ್ಲಿ ಚಿಕ್ಕಮಗಳೂರಿನ ಆಜಾದ್ ಸರ್ಕಲ್ ಬಳಿ ಸುಮಾರು 15 ರಿಂದ 20 ಜನ ಬಿ.ಜೆ.ಪಿ ಕಾರ್ಯಕರ್ತರು ಸರ್ಕಾರದ ವಿರುದ್ಧ ಗೋಷಣೆ ಕೂಗುತ್ತ ದಲಿತ ವಿರೋಧಿ ಸರ್ಕಾರಕ್ಕೆ ಧಿಕ್ಕಾರ ಎಂದು ಚುನಾವಣಾ ನೀತಿ ಸಂಹಿತೆಯನ್ನ ಉಲ್ಲಂಘನೆ ಮಾಡುತ್ತಿದ್ದರು. ಪ್ರತಿಭಟನಾ ನಿರತರು ತಮ್ಮ ಕೈಗಳಲ್ಲಿ ಪೋಸ್ಟರ್ ಗಳನ್ನ ಹಿಡಿದುಕೊಂಡು ತಮ್ಮ ಬಿ.ಜೆ.ಪಿ. ಸರ್ಕಾರ ಇದ್ದಾಗ 26 ಕೆ.ಜಿ. ಅಕ್ಕಿಗೆ ರೂ.11,400/- ಕೊಡುತ್ತಿತ್ತು ಆದರೆ ಕಾಂಗ್ರೆಸ್ ಸರ್ಕಾರ 26 ಕೆ.ಜಿ. ಅಕ್ಕಿಗೆ ಬ್ಯಾಗ್ಗೆ ರೂ.18,000/- ಹಣ ಹೆಚ್ಚಿಸಿದೆ ಎಂದು ಬರೆದಿದ್ದರು. ಅಲ್ಲದೇ ಪ್ರತಿಭಟನೆ ನಿರತರು ಕೈಯಲ್ಲಿ ಖಾಲಿ ಚೊಂಬನ್ನ ಹಿಡಿದುಕೊಂಡು ಪ್ರತಿಭಟನೆ ನಡೆಸುತ್ತಿದ್ದರು. ನನ್ನ ಜೊತೆ ಇದ್ದ ವೀಡಿಯೋಗ್ರಾಫರ್ ಸದರಿ ಪ್ರತಿಭಟನೆಯನ್ನ ವೀಡಿಯೋ ಮಾಡಿಕೊಂಡರು. ಆನಂತರ ನಾನು ಘಟನೆ ಸಂಬಂಧ ನಗರ ಪೊಲೀಸ್ ಠಾಣೆಗೆ ದೂರು ದಾಖಲು ಮಾಡಿರುತ್ತೇನೆ. ನನ್ನ ಜೊತೆಯಲ್ಲಿ ಇದ್ದ ಪೊಲೀಸ್ ಸಿಬ್ಬಂದಿ ಪ್ರತಿಭಟನಾನಿರತರ ಹೆಸರನ್ನ ಗುರುತಿಸಿ ಹೇಳಿದ ಮೇರೆಗೆ ಅವರನ್ನ ಹೆಸರನ್ನ ದೂರಿನಲ್ಲಿ ನಮೂದು ಮಾಡಲಾಗಿದೆ. ಸಾಕ್ಷಿಗೆ ದೂರನ್ನ ತೋರಿಸಲಾಗಿ ಅದರ ಮೇಲೆ ಇರುವ ತನ್ನ ಸಹಿಯನ್ನ ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ-1 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ದೂರು ದಾಖಲಾದ ಮಾರನೇ ದಿನ ಪೊಲೀಸರು ಸ್ಥಳಕ್ಕೆ ಬಂದರು. ನಾನು

This is a True Copy of the Court Records Online. Authenticated @ districts.ecourtsindia.com/cnr/KACM020012082024/truecopy/order-1.pdf

ಸ್ಥಳದಲ್ಲಿ ಹಾಜರಿದ್ದು ಇದೇ ಘಟನಾ ಸ್ಥಳ ಎಂದು ತೋರಿಸಿದೆ. ಪೊಲೀಸರು ಮನೋಜ್ ಮತ್ತು ಪ್ರಶಾಂತ್ ಇವರನ್ನ ಪಂಚಸಾಕ್ಷಿಗಳನ್ನಾಗಿ ಬರಮಾಡಿಕೊಂಡು ಘಟನಾ ಸ್ಥಳದಲ್ಲಿ ಮಹಜರ್ ಬರೆದಿರುತ್ತಾರೆ. ಮಹಜರ್ ಕಾಲಕ್ಕೆ ಫೋಟೋ ತೆಗೆದಿರುತ್ತಾರೆ. ಸಾಕ್ಷಿಗೆ ಮಹಜರ್ ಅನ್ನ ತೋರಿಸಲಾಗಿ ಅದರ ಮೇಲೆ ಇರುವ ತನ್ನ ಸಹಿಯನ್ನ ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ-2 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಫೋಟೋವನ್ನ ತೋರಿಸಲಾಗಿ ಅದನ್ನ ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ನಿಪಿ-3 ರ ಫೋಟೋದಲ್ಲಿ ಕಾಣುವ ಜಾಗ ಚಿಕ್ಕಮಗಳೂರಿನ ಆಜಾದ್ ಸರ್ಕಲ್ ಆಗಿದ್ದು ಅದರಲ್ಲಿ ನಾನು, ಚಾಸಾ-2, 3 ಮತ್ತು ಪೊಲೀಸರು ಇದ್ದೇವೆ. ಘಟನಾ ಕಾಲಕ್ಕೆ ಸೆರೆ ಮಾಡಿದ್ದ ವೀಡಿಯೋವನ್ನ ವೀಡಿಯೋಗ್ರಾಫರ್ ಮುಖಾಂತರ ಸಿ.ಡಿ.ಗೆ ವರ್ಗಾವಣೆ ಮಾಡಿ ಸದರಿ ಸಿ.ಡಿ.ಯನ್ನ ತನಿಖಾಧಿಕಾರಿ ಮುಂದೆ ಹಾಜರು ಮಾಡಿದ್ದೇನೆ. ಈ ಸಂಬಂಧ ದಿಃ25.04.2024 ರಂದು ಪೊಲೀಸರು ಸಿ.ಡಿ.ಯನ್ನ ಅಮಾನತ್ತುಪಡಿಸಿಕೊಂಡು ಮಹಜರ್ ಕ್ರಮ ಜರುಗಿಸಿರುತ್ತಾರೆ. ಆ ಕಾಲಕ್ಕೆ ಪೊಲೀಸರು ಫೋಟೋ ತೆಗೆದಿರುತ್ತಾರೆ. ಸದರಿ ಮಹಜರ್ ಗೂ ಸಹ ಚಾಸಾ-2 ಮತ್ತು ಚಾಸಾ-3 ರವರು ಹಾಜರಿದ್ದು ನನ್ನ ಜೊತೆ ಸಹಿ ಮಾಡಿರುತ್ತಾರೆ. ಸಾಕ್ಷಿಗೆ ಮಹಜರ್ ಅನ್ನ ತೋರಿಸಲಾಗಿ ಅದರ ಮೇಲೆ ಇರುವ ತನ್ನ ಸಹಿಯನ್ನ ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ-4 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ನಿಪಿ-4 ರ ಕಾಲಕ್ಕೆ ತೆಗೆದ 2 ಫೋಟೋಗಳನ್ನ ನೋಡಿ ಗುರುತಿಸಿದ್ದೇನೆ. ಅವುಗಳನ್ನ ನಿಪಿ-5

This is a True Copy of the Court Records Online. Authenticated @ districts.ecourtsindia.com/cnr/KACM020012082024/truecopy/order-1.pdf

ಮತ್ತು ನಿಪಿ-6 ಎಂದು ಗುರುತಿಸಲಾಯಿತು. ನಿಪಿ-5 ಮತ್ತು ನಿಪಿ-6 ರಲ್ಲಿ ಕಾಣುವ ಸ್ಥಳ ನಗರ ಪೊಲೀಸ್ ಠಾಣೆ ಒಳಭಾಗದ ಸ್ಥಳ ಆಗಿದ್ದು ಅದರಲ್ಲಿ ನಾನು, ಚಾಸಾ-2, 3 ಮತ್ತು ಪೊಲೀಸರು ಇದ್ದೇವೆ. ನಿಪಿ-6 ರಲ್ಲಿ ಪೊಲೀಸರಿಗೆ ಸಿ.ಡಿ.ಕೊಡುತ್ತಿರುವುದು ಮತ್ತು ನಿಪಿ-5 ರಲ್ಲಿ ಸಿ.ಡಿ.ಯ ದೃಶ್ಯಾವಳಿಗಳನ್ನ ಸಾಕ್ಷಿದಾರರು ಮತ್ತು ನಾನು ವೀಕ್ಷಣೆ ಮಾಡುತ್ತಿರುವುದು ಕಂಡುಬರುತ್ತದೆ. ಆರೋಪಿತರನ್ನ ನೋಡಿದರೆ ಗುರುತಿಸುತ್ತೇನೆ.

ಪಾಟೀ ಸವಾಲುಃ ಆರೋಪಿಗಳ ಪರಃ ಶ್ರೀ ಎನ್.ಡಿ.ಕೆ. ವಕೀಲರಿಂದಃ-

ಆರೋಪಿತರು ನನಗೆ ಘಟನೆ ನಡೆಯಿತು ಎನ್ನಲಾದ ಪೂರ್ವದಲ್ಲಿ ವೈಯಕ್ತಿಕವಾಗಿ ಪರಿಚಯ ಇರಲಿಲ್ಲ. ಸದರಿಯವರನ್ನ ನಾನು ಆ ಹಿಂದೆ ಯಾವತ್ತೂ ನೋಡಿರಲಿಲ್ಲ. ಆರೋಪಿತರು ಯಾವ ಪಕ್ಷದ ಕಾರ್ಯಕರ್ತರು ಎಂದು ನನಗೆ ವಯಕ್ತಿಕವಾಗಿ ಗೊತ್ತಿಲ್ಲ. ಆ ದಿನ ನನಗೆ ಬೆಳಗ್ಗೆಃ06.00 ರಿಂದ ಮಧ್ಯಾಹ್ನಃ02.00 ರವರೆಗೆ ಕರ್ತವ್ಯ ಇತ್ತು. ಪೊಲೀಸರು ನನ್ನನ್ನ ಪ್ಲೆಯಿಂಗ್ ಸ್ಕ್ವಾಡ್ ಆಗಿ ನೇಮಕ ಮಾಡಿ ಹೊರಡಿಸಿದ ಆದೇಶವನ್ನ ಪಡೆದಿರುತ್ತಾರೆ. ನಿಪಿ-1 ನ್ನ ನನ್ನ ಕಛೇರಿಯಲ್ಲಿ ಟೈಪ್ ಮಾಡಿಸಿದ್ದೇನೆ. ಕಛೇರಿಗೆ ಎಷ್ಟು ಗಂಟೆಗೆ ದೂರನ್ನ ಟೈಪ್ ಮಾಡಿಸಲು ಬಂದಿರುತ್ತೀರಾ ಎಂದರೆ ಸಾಕ್ಷಿ 02.00 ರಿಂದ 02.30 ಗಂಟೆಗೆ ಕಛೇರಿಗೆ ಬಂದೆ ಎನ್ನುತ್ತಾರೆ. ದೂರು ಟೈಪ್ ಮಾಡಿಸಿದಾಗ ನಾನು ಮತ್ತು ಕಂಪ್ಯೂಟರ್ ಆಪರೇಟರ್ ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ. ದೂರನ್ನ ಕೊಡಲು ಠಾಣೆಗೆ ಮಧ್ಯಾಹ್ನಃ03.00 ರಿಂದ 04.00 ಗಂಟೆಗೆ ಹೋದೆ. ದೂರು ಕೊಡಲು ಠಾಣೆಯಲ್ಲಿ ಸುಮಾರು 20 ರಿಂದ 25 ನಿಮಿಷ ಇದ್ದೆ. ಠಾಣೆಗೆ ದೂರು ಕೊಡಲು ನಾನು ಒಬ್ಬಳೇ ಹೋಗಿದ್ದೆ. ಆ

This is a True Copy of the Court Records Online. Authenticated @ districts.ecourtsindia.com/cnr/KACM020012082024/truecopy/order-1.pdf

www.ecourtsindia.com

ಕಾಲಕ್ಕೆ ನನ್ನ ಮತ್ತು ಪೊಲೀಸರ ನಡುವೆ ಯಾವುದೇ ಮಾತುಕತೆ ನಡೆದಿಲ್ಲ. ದೂರು ಕೊಟ್ಟ ನಂತರ ನಾನು ನನ್ನ ಕೃಷಿ ಕಛೇರಿಗೆ ವಾಪಾಸಾದೆ. ದೂರು ದಾಖಲು ಮಾಡಿದ ಮಾರನೇ ದಿನ ಸಿ.ಡಿ. ಕೊಡಲು ಠಾಣೆಗೆ ಹೋಗಿದ್ದೆ. ನನ್ನ ತಂಡದಲ್ಲಿ ಇದ್ದ ವೀಡಿಯೋ ಗ್ರಾಫರ್ ಸಿ.ಡಿ.ಯನ್ನ ನನ್ನ ಕೈಯಲ್ಲಿ ಕೊಟ್ಟಿದ್ದರು. ಸದರಿಯವರು ಮಾರನೇ ದಿನ ಬೆಳಗ್ಗೆ:06.00 ಗಂಟೆಗೆ ಕರ್ತವ್ಯಕ್ಕೆ ಹಾಜರಾದ ಕೂಡಲೇ ಅದನ್ನ ನನಗೆ ಕೊಟ್ಟರು. ಸಿ.ಡಿ.ಯನ್ನ ಪೊಲೀಸರಿಗೆ ಕೊಡಲು ಎಷ್ಟು ಗಂಟೆಗೆ ಠಾಣೆಗೆ ಹೋಗಿದ್ದೆ ಎಂದು ಈಗ ನೆನಪಿಲ್ಲ, ಸಾಕ್ಷಿ ಮುಂದುವರಿದು ಮಾರನೇ ದಿನ ಮಧ್ಯಾಹ್ನಃ02.00 ನಂತರದಲ್ಲಿ ಠಾಣೆಗೆ ಹೋಗಿರಬಹುದು ಎನ್ನುತ್ತಾರೆ. ವೀಡಿಯೋ ದೃಶ್ಯಾವಳಿಗಳನ್ನ ದಿಃ24.04.2024 ರಂದು ತೆಗೆಯಲಾಯಿತು ಎಂದು ಯಾವಾಗ ಪರಿಶೀಲನೆ ಮಾಡಿದ್ದೀರಾ ಎಂದರೆ ಸಾಕ್ಷಿ ದಿಃ25.04.2024 ರಂದು ಚುನಾವಣಾಧಿಕಾರಿಗಳ ಕಛೇರಿಯಲ್ಲಿ ಪರಿಶೀಲನೆ ಮಾಡಲಾಯಿತು ಎನ್ನುತ್ತಾರೆ. ಆ ರೀತಿ ಪರಿಶೀಲನೆ ಮಾಡಿದ ಕಾಲಕ್ಕೆ ನಾನು ಮತ್ತು ವೀಡಿಯೋಗ್ರಾಫರ್ ಪ್ರಶಾಂತ್ ಇದ್ದೆವು. ಘಟನೆ ನಡೆಯಿತು ಎನ್ನಲಾದ ಕಾಲಕ್ಕೆ ಯಾರ ಯಾರ ಕೈಯಲ್ಲಿ ಪೋಸ್ಟರ್ ಇತ್ತು ಯಾರ ಯಾರ ಕೈಯಲ್ಲಿ ಚೊಂಬುಗಳು ಇದ್ದವು ಎಂದು ಹೇಳಲು ಸಾಧ್ಯವಿಲ್ಲ. ಘಟನೆ ನಡೆಯಿತು ಎನ್ನಲಾದ ಕಾಲಕ್ಕೆ ನಾನು ಖುದ್ದಾಗಿ ಯಾವುದೇ ಮಹಜರ್ ಬರೆದಿಲ್ಲ. ನ್ಯಾಯಾಲಯದ ಮುಂದೆ ಆರೋಪಿತರನ್ನ ನೋಡಿದರೆ ಯಾವ ಆರೋಪಿ ಹೆಸರು ಏನು ಎಂದು ನಿರ್ದಿಷ್ಟವಾಗಿ ಗುರುತಿಸಲು ಸಾಧ್ಯವಾಗುವುದಿಲ್ಲ. ನನ್ನ ಅಧಿಕಾರ ವ್ಯಾಪ್ತಿಗೆ ಚಿಕ್ಕಮಗಳೂರು ನಗರ ವ್ಯಾಪ್ತಿ ಒಳಪಡುತ್ತಿತ್ತು. ನಿಪಿ-2 ಮತ್ತು 4 ರ ಕಾಲಕ್ಕೆ ಹಾಜರಿದ್ದು

This is a True Copy of the Court Records Online. Authenticated @ districts.ecourtsindia.com/cnr/KACM020012082024/truecopy/order-1.pdf

ಸಹಕರಿಸಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-3, 5 ಮತ್ತು ನಿಪಿ-6 ನ್ನ ಈ ಕೇಸಿಗಾಗಿ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಕಾಂಗ್ರೇಸ್ ಪಕ್ಷದ ಒತ್ತಡದ ಮೇರೆಗೆ ನನ್ನ ಮೇಲಾಧಿಕಾರಿಗಳು ನನ್ನ ಮುಖಾಂತರ ದೂರನ್ನ ನೀಡಿಸಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

ಮರು ಸವಾಲುಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ

This is a True Copy of the Court Records Online. Authenticated @ districts.ecourtsindia.com/cnr/KACM020012082024/truecopy/order-1.pdf